ರಾಷ್ಟ್ರೀಯ ಶಿಕ್ಷಣ ನೀತಿ (NEP) 2020 ಮತ್ತು ಭಾರತೀಯ ಭಾಷೆ

ಎನ್. ಬಿ. ಝುರೆ

ಸಂಶೋಧನಾರ್ಥಿ, ಶರಣಬಸವ ವಿಶ್ವವಿದ್ಯಾಲಯ, ಕಲಬುರಗಿ.

DOI: https://doi.org/10.5281/zenodo.18332722

ABSTRACT:

ಭಾರತೀಯ ಜ್ಞಾನಪರಂಪರೆ ಗಣಿತ, ಖಗೋಳವಿಜ್ಞಾನ, ವೈದ್ಯಕೀಯ, ವಾಸ್ತುಶಿಲ್ಪ, ಲಲಿತಕಲೆಗಳು, ಯೋಗ ಹಾಗೂ ದರ್ಶನಶಾಸ್ತ್ರದಂತಹ ಅನೇಕ ಕ್ಷೇತ್ರಗಳಲ್ಲಿ ವಿಶ್ವಮಾನ್ಯವಾದ ಕೊಡುಗೆಗಳನ್ನು ನೀಡಿದೆ. ಈ ಜ್ಞಾನಪರಂಪರೆಯ ಆಧಾರದ ಮೇಲೆ ರೂಪುಗೊಂಡಿರುವ ರಾಷ್ಟ್ರೀಯ ಶಿಕ್ಷಣ ನೀತಿ–2020 ಶಿಕ್ಷಣ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಗಳನ್ನು ತರಲು ಪ್ರಯತ್ನಿಸುತ್ತಿದೆ. ಈ ನೀತಿಯು ಅಧ್ಯಾಪಕರ ಸಬಲೀಕರಣ, ಸಮಾನ ಮತ್ತು ಗುಣಮಟ್ಟದ ಶಿಕ್ಷಣ, ತಂತ್ರಜ್ಞಾನದ ಸಮರ್ಥ ಬಳಕೆ, ಸಂಶೋಧನಾ ಪ್ರೋತ್ಸಾಹ ಹಾಗೂ ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಒತ್ತು ನೀಡುತ್ತದೆ. ವಿಶೇಷವಾಗಿ ಮಾತೃಭಾಷೆ/ಮನೆಭಾಷೆಯನ್ನು ಶಿಕ್ಷಣದ ಮಾಧ್ಯಮವಾಗಿಸುವ ಮೂಲಕ ಕಲಿಕೆ ಪರಿಣಾಮಕಾರಿಯಾಗಬೇಕು ಎಂಬ ಆಶಯವನ್ನು ಇದು ಪ್ರತಿಪಾದಿಸುತ್ತದೆ. ಜಾಗತೀಕರಣದ ಪರಿಣಾಮವಾಗಿ ಸಣ್ಣ ಭಾಷೆಗಳು ಅಳಿವಿನ ಅಂಚಿಗೆ ತಲುಪುತ್ತಿರುವ ಈ ಸಂದರ್ಭದಲ್ಲಿ, ಭಾಷೆ ಮತ್ತು ಸಂಸ್ಕೃತಿಯ ಸಂರಕ್ಷಣೆಯ ಹೊಣೆಗಾರಿಕೆಯನ್ನು ಶಿಕ್ಷಣ ವ್ಯವಸ್ಥೆ ಹೊತ್ತುಕೊಳ್ಳಬೇಕಾದ ಅಗತ್ಯವನ್ನು ಈ ಲೇಖನ ವಿಶ್ಲೇಷಿಸುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿ–2020ರ ಭಾಷಾ ನೀತಿ, ಅದರ ಸವಾಲುಗಳು ಹಾಗೂ ಸಾಧ್ಯತೆಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವ ಮೂಲಕ ಭಾರತೀಯ ಭಾಷೆಗಳ ಉಳಿವು ಮತ್ತು ಬೆಳವಣಿಗೆಯಲ್ಲಿ ಶಿಕ್ಷಣದ ಪಾತ್ರವನ್ನು ಈ ಲೇಖನ ಪ್ರಸ್ತುತಪಡಿಸುತ್ತದೆ.

KEYWORDS:

ರಾಷ್ಟ್ರೀಯ ಶಿಕ್ಷಣ ನೀತಿ–2020, ಭಾರತೀಯ ಜ್ಞಾನಪರಂಪರೆ, ಮಾತೃಭಾಷೆ, ಭಾಷಾ ಶಿಕ್ಷಣ, ಸಣ್ಣ ಭಾಷೆಗಳ ಅಳಿವು, ಸಂಸ್ಕೃತಿ ಮತ್ತು ಶಿಕ್ಷಣ, ಬಹುಭಾಷಿತ್ವ, ಭಾಷಾ ಸಂರಕ್ಷಣೆ.

ಪ್ರಸ್ತಾವನೆ:

ಪ್ರಕಾಂಡ ವಿದ್ವಾಂಸರು ಗಣಿತ, ಖಗೋಳವಿಜ್ಞಾನ, ಲೋಹವಿದ್ಯೆ, ಶಸ್ತ್ರಚಿಕಿತ್ಸೆ, ವಾಸ್ತುಶಿಲ್ಪ, ಶಿಲ್ಪ ವಿಜ್ಞಾನ, ಹಡಗು ನಿರ್ಮಾಣ, ನೌಕಾವಿದ್ಯೆ, ಯೋಗ, ಲಲಿತಕಲೆಗಳು, ಚದುರಂಗ, ಇಂಥ ಹಲವಾರು ಕ್ಷೇತ್ರಗಳಿಗೆ ತಮ್ಮ ಅಭೂತಪೂರ್ವವಾದ ಹಾಗೂ ಮುಂದಿನ ಬೆಳವಣಿಗೆಗಳಿಗೆ ತಳಹದಿ ಹಾಕಿಕೊಡಬಲ್ಲ ಕೊಡುಗೆಗಳನ್ನು ಅರ್ಪಿಸಿದ್ದರು. ಭಾರತೀಯ ಸಂಸ್ಕೃತಿ ಮತ್ತು ದರ್ಶನಶಾಸ್ತ್ರ ಇಡೀ ವಿಶ್ವದ ಮೇಲೆ ತನ್ನ ದಟ್ಟವಾದ ಪ್ರಭಾವವನ್ನು ಬೀರಿತ್ತು. ಶಿಕ್ಷಣ ವ್ಯವಸ್ಥೆಯ ಮೂಲಭೂತ ಸುಧಾರಣೆಗಳ ಕೇಂದ್ರದಲ್ಲಿ ಅಧ್ಯಾಪಕ ಅಗತ್ಯವಾಗಿ ಇರಲೇಬೇಕು. ಹೊಸ ಶಿಕ್ಷಣ ನೀತಿ ಎಲ್ಲ ಹಂತಗಳಲ್ಲೂ ಸಮಾಜದಲ್ಲಿ ಅತ್ಯಂತ ಗೌರವಾನ್ವಿತರಾದ ಹಾಗೂ ಅತ್ಯಗತ್ಯರೆನಿಸಿದ ಸದಸ್ಯರಾಗಿ ಅಧ್ಯಾಪಕರೇ ಇರುತ್ತಾರೆ. ಅಧ್ಯಾಪಕರು ತಮ್ಮ ಕೆಲಸಕಾರ್ಯಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಪರಿಣಾಮಕಾರಿಯಾಗಿ ನಿರ್ವಹಿಸಿಕೊಂಡು ಹೋಗಲು ಸಾಧ್ಯವಾಗುವಂತೆ ಅದು ಅವರನ್ನು ಸಬಲೀಕರಣಗೊಳಿಸಬೇಕು ಹಾಗೂ ನೆರವಾಗಬೇಕು. ವಿದ್ಯಾರ್ಥಿಗಳಿಗೆ ಅವರ ವಾಸಸ್ಥಾನ ಯಾವುದೇ ಆಗಿರಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳದೆ, ಗುಣಾತ್ಮಕವಾದ ಶಿಕ್ಷಣ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕು. ಐತಿಹಾಸಿಕವಾಗಿ ಅಂಚಿನಲ್ಲಿ ಉಳಿದುಬಿಟ್ಟಿರುವ, ಅವಕಾಶವಂಚಿತರ ಹಾಗೂ ಹೆಚ್ಚು ಪ್ರಾತಿನಿಧ್ಯ ಸೌಲಭ್ಯವಿಲ್ಲದ ಸಮುದಾಯಗಳನ್ನು ಇಲ್ಲಿ ವಿಶೇಷವಾಗಿ ದೃಷ್ಟಿಯಲ್ಲಿ ಇಟ್ಟುಕೊಳ್ಳಬೇಕು. ನಮ್ಮ ದೇಶದ ಪ್ರಾದೇಶಿಕ ಹಾಗೂ ಜಾಗತಿಕ ಅಗತ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಎಲ್ಲ ಅಂಶಗಳನ್ನು ಅಳವಡಿಸಿಕೊಳ್ಳುವುದು ಅಗತ್ಯ. ರಾಷ್ಟ್ರೀಯ ಹೆಮ್ಮೆ, ಗೌರವಗಳು, ಆತ್ಮವಿಶ್ವಾಸ, ಆತ್ಮಜ್ಞಾನ, ಸಹಕಾರ ಮತ್ತು ಏಕತಾ ಭಾವನೆಗಳನ್ನು ರೂಢಿಸುವ ಸಲುವಾಗಿ ನಮ್ಮ ಯುವಜನಾಂಗಕ್ಕೆ ಭದ್ರವಾದ ನೈತಿಕ ನೆಲೆಗಟ್ಟನ್ನು ಒದಗಿಸಿಕೊಡುವುದು ಕೂಡಾ ಅಷ್ಟೇ ಅವಶ್ಯಕವಾಗಿದ್ದು, ಹೊಸ ಶಿಕ್ಷಣ ನೀತಿಯು ಇವುಗಳನ್ನು ಒಳಗೊಂಡಿದೆ ಎನ್ನಬಹುದು.

ಹೊಸ ಶಿಕ್ಷಣ ನೀತಿಯನ್ನು ಗಮನಿಸಿದಾಗ ಅದು ಶಿಫಾರಸು ಮಾಡಿರುವ ವಿಚಾರಗಳನ್ನು ಈ ರೀತಿಯಾಗಿ ಕಾಣಬಹುದು:

ಚಿಕ್ಕ ಮಕ್ಕಳು ತಮ್ಮ ಮನೆಯ ಭಾಷೆಯಲ್ಲಿ, ಮಾತೃಭಾಷೆಯಲ್ಲಿ ಅರ್ಥ ಸಹಿತವಾದ ಮಾತುಗಳನ್ನು ಮತ್ತು ಪರಿಕಲ್ಪನೆಗಳನ್ನು ಹೆಚ್ಚು ಬೇಗ ಕಲಿಯುತ್ತಾರೆ ಮತ್ತು ಅರ್ಥ ಮಾಡಿಕೊಳ್ಳುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಮನೆಭಾಷೆಯೆಂದರೆ ಸಾಧಾರಣವಾಗಿ ಮಾತೃಭಾಷೆ ಅಥವಾ ಸ್ಥಳೀಯ ಸಮುದಾಯಗಳು ಆಡುವ ಭಾಷೆಗಳಾಗಿರುತ್ತವೆ. ಇಷ್ಟಾದರೂ ವಾಸ್ತವ ಸಂಗತಿ ಏನೆಂದರೆ ಅನೇಕ ವೇಳೆ ಬಹುಭಾಷಿಕ ಕುಟುಂಬಗಳಲ್ಲಿ ಮನೆಯ ಕೆಲವರು ತಮ್ಮದೇ ವಿಶಿಷ್ಟವಾದ ಮನೆ ಮಾತು ಬಳಕೆ ಮಾಡಬಹುದು. ಈ ಭಾಷೆಯು ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಗಿಂತ ಬೇರೆಯದೇ ಆಗಬಹುದು. ಸಾಧ್ಯವಾದ ಮಟ್ಟಿಗೆ ಕಡೇ ಪಕ್ಷ ಐದನೆಯ ತರಗತಿವರೆಗೆ ಅಥವಾ ಮುಂದೆ ಎಂಟನೆಯ ತರಗತಿವರೆಗೆ ಅಥವಾ ಅದಕ್ಕಿಂತಲೂ ಮುಂದೆ ಶಿಕ್ಷಣದ ಮಾಧ್ಯಮ ಮನೆಭಾಷೆ/ಪ್ರಾದೇಶಿಕ ಭಾಷೆ/

ಮಾತೃಭಾಷೆ ಅಥವಾ ಸ್ಥಳೀಯ ಭಾಷೆಯನ್ನು ಒಂದು ಭಾಷೆಯಾಗಿ ಓದುವಂತ ಅವಕಾಶ ಇರತಕ್ಕದ್ದು. ಸರಕಾರಿ ಹಾಗೂ ಖಾಸಗಿ ಎರಡೂ ಬಗೆಯ ಶಾಲೆಗಳಲ್ಲಿ ಇದನ್ನು ಜಾರಿಗೆ ತರಲಾಗುತ್ತದೆ. ವಿಜ್ಞಾನ ಸೇರಿದಂತೆ ಎಲ್ಲ ವಿಷಯಗಳಲ್ಲೂ ಉನ್ನತ ಮಟ್ಟದ ಪಠ್ಯ ಪುಸ್ತಕಗಳನ್ನು ಮನೆಭಾಷೆಯಲ್ಲಿ/ಮಾತೃಭಾಷೆಯಲ್ಲಿ ದೊರಕಿಸಿಕೊಡಲಾಗುವುದು. ಒಂದು ವೇಳೆ ಮಗು ಆಡುವ ಭಾಷೆ ಹಾಗೂ ಶಿಕ್ಷಣ ಮಾಧ್ಯಮ ಇವೆರೆಡೂ ಎಲ್ಲಿಯೇ ಆದರೂ ಬೇರೆ ಬೇರೆಯಾಗಿದ್ದರೆ ಅಂತಹ ಕಡೆಗಳಲ್ಲಿ ಆ ಕೊರತೆಯನ್ನು ತುಂಬುವ ಎಲ್ಲ ಪ್ರಯತ್ನ ಮಾಡಲಾಗುವುದು. ಮನೆಭಾಷೆಯಲ್ಲಿ ಒಂದು ವೇಳೆ ಪಠ್ಯ ಸಾಮಗ್ರಿ ದೊರೆಯದೇ ಇರುವಂಥ ಸಂದರ್ಭಗಳಲ್ಲಿ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ನಡುವೆ ಸಂಭಾಷಣೆ ರೂಪದಲ್ಲಾದರೂ ಮನೆಭಾಷೆಯನ್ನು ಬಳಕೆಗೆ ತರಲಾಗುತ್ತದೆ. ಇದು ಸಾಧ್ಯವಾಗಲು ಸಂವಿಧಾನದ ಎಂಟನೆಯ ಪರಿಚ್ಛೇದದಲ್ಲಿರುವ ಎಲ್ಲ ಭಾಷೆಗಳ ಭಾಷಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಪ್ರಯತ್ನ ಮಾಡುವುದು. ಸಾಮಾಜಿಕ ಆರ್ಥಿಕ ಪರಿಸ್ಥಿತಿ ಏನೇ ಇದ್ದರೂ ಸಮಾನ ಶಿಕ್ಷಣ ದೊರೆಯಬೇಕು. ಬೋಧನೆ ಮತ್ತು ಕಲಿಕೆ ಎರಡರಲ್ಲೂ ಬಹುಭಾಷಿಯತೆ ಮತ್ತು ಭಾಷಾ ಶಕ್ತಿ ಇವುಗಳಿಗೆ ಪ್ರೋತ್ಸಾಹ ನೀಡುವುದು.

ಇದು ಕೂಡಾ ಬಹಳ ಒಳ್ಳೆಯ ಶಿಫಾರಸು ಆಗಿದೆ ಎಂಬುದರಲ್ಲಿ ಸಂಶಯವಿಲ್ಲ. ಉನ್ನತ ಶಿಕ್ಷಣದಲ್ಲಿಯೂ ಮಾತೃಭಾಷೆಯಲ್ಲಿ ಪಠ್ಯಗಳು ಸಿಗಬೇಕೆಂಬ ಆಶಯವನ್ನೂ ಅದು ಪ್ರಕಟಿಸಿದೆ. ಇವೆಲ್ಲವೂ ಸಾಧ್ಯವಾಗಬೇಕಾದರೆ ಸಾಕಷ್ಟು ದೀರ್ಘವಾದ ತಯಾರಿ ನಡೆಸಬೇಕು ಮತ್ತು ಜಿಡಿಪಿಯ ಆರು ಶೇಕಡಾ ಹಣವನ್ನೂ ಮೀಸಲಿಡಬೇಕೆಂದೂ ಅದು ಹೇಳಿದೆ. ಶಿಫಾರಸಿನ 25.1 ರಲ್ಲಿ ಸುದೀರ್ಘಾವಧಿಯ ದೃಷ್ಟಿಕೋನ, ತಜ್ಞರ ಜೊತೆ ಸಮಾಲೋಚನೆ, ಸಾಂಸ್ಥಿಕ ಪ್ರಯತ್ನಗಳ ಅಗತ್ಯವಿದೆ ಎಂದು ಹೇಳಲಾಗಿದೆ.

ಹೊಸ ಶಿಕ್ಷಣ ನೀತಿಯ ಜಾರಿಯಲ್ಲಿ ಮುಖ್ಯವಾದ ಮೂರು ವಿಷಯಗಳು ಈ ಕೆಳಗಿನಂತಿವೆ:

1. ಶಿಕ್ಷಣ ಕ್ಷೇತ್ರದಲ್ಲಿ ಅಂತರಾಷ್ಟ್ರೀಯ ವಿದ್ಯಾರ್ಥಿಗಳ ಹಾಜರಾತಿ: ಈ ಶಿಫಾರಸಿನ ಪ್ರಕಾರ ಭಾರತದ ಬಹುತೇಕ ಪ್ರೌಢ ಶಾಲಾ ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದೇಶೀ ವಿದ್ಯಾರ್ಥಿಗಳು ವ್ಯಾಸಂಗ ಮಾಡಲಿದ್ದಾರೆ. ಈ ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ನಾವು ಪಠ್ಯಕ್ರಮ, ಅಧ್ಯಯನದ ಅವಧಿ ಮತ್ತು ಮೌಲ್ಯಮಾಪನ ವಿಧಾನಗಳಲ್ಲಿ ಸೂಕ್ತವಾದ ಬದಲಾವಣೆಗಳನ್ನು ಮಾಡಿಕೊಳ್ಳಲು ತಯಾರಾಗಬೇಕಾಗಿದೆ.

2. ದೇಶೀಯ ಮತ್ತು ವಿದೇಶೀಯ ವಿದ್ಯಾಲಯಗಳು ಒಟ್ಟಿಗೆ ಕೆಲಸ ಮಾಡುವ ಅವಳಿ ಕಾರ್ಯಕ್ರಮಗಳು ಹಾಗೂ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಗಳು: ಈ ಯೋಜನೆಯಲ್ಲಿ ಖಾಸಗಿ ಶಾಲೆಗಳು ಹಾಗೂ ವಿಶ್ವವಿದ್ಯಾಲಯಗಳು ವಿದೇಶಿ ಶಾಲಾ ಕಾಲೇಜುಗಳೊಂದಿಗೆ ಸಂಬಂಧ ಸ್ಥಾಪಿಸಿಕೊಳ್ಳುತ್ತವೆ. ಆ ಮೂಲಕ ಪರಸ್ಪರ ಮಾಹಿತಿ ಹಾಗೂ ಪರಿಣತರ ವಿನಿಮಯ ಸಾಧ್ಯವಾಗುತ್ತದೆ.

3. ಅತ್ಯುತ್ತಮ ಶಿಕ್ಷಣದ ರಫ್ತಿಗಾಗಿ ವಿಶೇಷ ವಲಯಗಳ ಸ್ಥಾಪನೆ: ಭಾರತ ದೇಶದ ಉತ್ತರ, ಪೂರ್ವ, ಪಶ್ಚಿಮ ಮತ್ತು ದಕ್ಷಿಣದಲ್ಲಿ ಆರಂಭವಾಗಲಿರುವ ಈ ವಿಶೇಷ ಶಿಕ್ಷಣ ವಲಯಗಳಲ್ಲಿ ಭಾರತೀಯ ಮತ್ತು ವಿದೇಶೀಯ ಶಿಕ್ಷಣ ಸಂಸ್ಥೆಗಳು ಜಂಟಿಯಾಗಿ ಕಾರ್ಯಕ್ರಮಗಳನ್ನು ರೂಪಿಸುತ್ತಿವೆ.

ರಾಷ್ಟ್ರೀಯ ಶಿಕ್ಷಣ ನೀತಿ 2020ರ ಮಹತ್ವದ ವಿಷಯಗಳು:

1. ಸಂವಹನ, ಸಹಕಾರ, ತಂಡದ ಕೆಲಸ ಹಾಗೂ ನವಚೇತನ ಬದುಕಿಗೆ ಅಗತ್ಯವಾದ ಕೌಶಲಗಳಿಗೆ ಒತ್ತಾಸೆ ನೀಡುವುದು.

2. ಇಂದಿನ ಕೋಚಿಂಗ್ ಸಂಸ್ಕೃತಿಯನ್ನು ಬೆಂಬಲಿಸಿ ಪೋಷಿಸುವ ಸಂಕಲನಾತ್ಮಕ ಮೌಲ್ಯಮಾಪನವನ್ನು ದೂರಮಾಡಿ ರೂಪಾತ್ಮಕ ಮೌಲ್ಯಮಾಪನಕ್ಕೆ ದಾರಿ ಮಾಡಿಕೊಡುವುದು.

3. ಬೋಧನೆಯಲ್ಲಿ ಮತ್ತು ಕಲಿಕೆಯಲ್ಲಿ ವ್ಯಾಪಕವಾಗಿ ತಂತ್ರಜ್ಞಾನದ ಬಳಕೆ ಮಾಡುವುದು. ಇದರೊಟ್ಟಿಗೆ ಭಾಷಾ ಬಂಧನಗಳನ್ನು ಬದಿಗಿರಿಸುವುದು, ದಿವ್ಯಾಂಗ ಅಥವಾ ವಿಭಿನ್ನ ಸಾಮರ್ಥ್ಯವುಳ್ಳ ಮಕ್ಕಳಿಗಾಗಿ ಸಾಧನೆ ಸೌಲಭ್ಯಗಳನ್ನು ಅಧಿಕಗೊಳಿಸುವುದು.

4. ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಗಳನ್ನು ಅಭಿವೃದ್ಧಿಪಡಿಸುವುದು.

5. ಎಲ್ಲ ವಿದ್ಯಾರ್ಥಿಗಳು ಶಿಕ್ಷಣ ವ್ಯವಸ್ಥೆಯಲ್ಲಿ ಯಶಸ್ವಿಯಾಗಿ ಮುಂದುವರಿಯಲು ಸಾಧ್ಯವಾಗುವಂತೆ ಎಲ್ಲ ಬಗೆಯ ಶೈಕ್ಷಣಿಕ ತೀರ್ಮಾನಗಳಲ್ಲಿ ಪೂರ್ಣ ಸಮಾನತೆ ಮತ್ತು ಸಮಾನವರ್ತನೆಯನ್ನು ಮೈಲುಗಲ್ಲಾಗಿ ಪರಿಗಣಿಸುವುದು.

6. ಅಧ್ಯಾಪಕರು ಮತ್ತು ಬೋಧಕವೃಂದ ಕಲಿಕೆ ಪ್ರಕ್ರಿಯೆಯಲ್ಲಿ ಹೃದಯಸದೃಶರಾಗುತ್ತಾರೆ. ಅವರ ನೇಮಕ, ನಿರಂತರ ವೃತ್ತಿಪರ ಏಳಿಗೆ, ಸೇವಾ ಪರಿಸರದ ಸೇವಾ ನಿಬಂಧನೆಗಳು ಗಮನಾರ್ಹವಾಗಿರುತ್ತದೆ.

7. ಅತ್ಯುತ್ತಮವಾದ ಶಿಕ್ಷಣ ಮತ್ತು ಬೆಳವಣಿಗೆಗಾಗಿ ಅತ್ಯುತ್ತಮವಾದ ಸಂಶೋಧನೆ ಸಹ ಜೊತೆಯಲ್ಲಿ ಸಾಗಬೇಕಾದ ಇನ್ನೊಂದು ಅಗತ್ಯ.

8. ನಾಡಿನ ಪ್ರಾಚೀನ ಹಾಗೂ ಆಧುನಿಕ ಸಂಸ್ಕೃತಿ, ಜ್ಞಾನಪರಂಪರೆ ಮತ್ತು ಸಂಪ್ರದಾಯಗಳ ಬಗ್ಗೆ ವಿಶೇಷ ಕಾಳಜಿ. ಹೀಗೆ ಹಲವಾರು ಮಹತ್ವದ ವಿಚಾರಗಳನ್ನು ಈ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕಾಣಬಹುದು.

ಕಲೆ ಮತ್ತು ಸಂಸ್ಕೃತಿಯ ಜೊತೆಗೆ ಭಾಷೆಯದ್ದು ನಿಸ್ಸಂದೇಹವಾಗಿ ಬಿಡಿಸಲಾರದ ನಂಟು. ನಾನಾ ಭಾಷೆಗಳು ಜಗತ್ತನ್ನು ಭಿನ್ನ ರೀತಿಯಲ್ಲಿ ನೋಡುತ್ತವೆ. ಹಾಗಾಗಿ ಒಂದು ಭಾಷೆಯ ಸ್ವರೂಪ ಅದನ್ನು ಮಾತನಾಡುವ ಸ್ಥಳೀಯರ ಅನುಭವದ ಗ್ರಹಿಕೆಯನ್ನು ನಿರ್ಧರಿಸುತ್ತದೆ. ನಿರ್ದಿಷ್ಟವಾಗಿ ಹೇಳಬೇಕೆಂದರೆ ಆಯಾ

ಸಂಸ್ಕೃತಿಗೆ ಸೇರಿದ ಜನರು ತಮ್ಮ ಕುಟುಂಬದ ಸದಸ್ಯರು, ಅಧಿಕಾರಿಗಳು, ತಜ್ಞರು ಮತ್ತು ಅಪರಿಚಿತರು ಸೇರಿದಂತೆ, ಇತರರೊಂದಿಗೆ ಮಾತನಾಡುವ ರೀತಿಯ ಮೇಲೆ ಭಾಷೆಗಳು ಪ್ರಭಾವ ಬೀರುತ್ತವೆ ಮತ್ತು ಮಾತಿನ ದಾಟಿಯ ಮೇಲೆಯೂ ಪ್ರಭಾವ ಬೀರುತ್ತವೆ. ಸಮಾನ ಭಾಷೆಯನ್ನು ಮಾತನಾಡುವ ಭಾಷಿಕರ ಸಂಭಾಷಣೆಯಲ್ಲಿ ಅಂತರ್ಗತವಾಗಿರುವ ಮಾತಿನ ಧಾಟಿ, ಅನುಭವದ ಗ್ರಹಿಕೆ ಮತ್ತು ಅನ್ಯೋನ್ಯತೆ ಒಂದು ಸಂಸ್ಕೃತಿಯ ಪ್ರತಿಬಿಂಬ ಅಥವಾ ದಾಖಲೆಯಾಗಿರುತ್ತದೆ. ಹಾಗಾಗಿ ಸಂಸ್ಕೃತಿಯು ನಮ್ಮ ಭಾಷೆಗಳಲ್ಲಿ ಆವರಿಸಿಕೊಂಡಿರುತ್ತದೆ. ಸಾಹಿತ್ಯ, ನಾಟಕ, ಚಲನಚಿತ್ರ ಇತ್ಯಾದಿ ರೂಪದಲ್ಲಿರುವ ಕಲೆಯನ್ನು ಭಾಷೆಯ ನಂಟು ಇಲ್ಲದೆ ಪೂರ್ಣವಾಗಿ ಪ್ರಶಂಸಿಸಲು ಸಾಧ್ಯವಿಲ್ಲ. ಸಂಸ್ಕೃತಿಯನ್ನು ಸಂರಕ್ಷಿಸಬೇಕು ಮತ್ತು ಪ್ರೋತ್ಸಾಹಿಸಬೇಕು. ದುರದೃಷ್ಟದ ಸಂಗತಿಯೆಂದರೆ, ಭಾರತೀಯ ಭಾಷೆಗಳಿಗೆ ಸಿಗಬೇಕಾದ ಮಾನ್ಯತೆ ಮತ್ತು ಕಾಳಜಿ ಸಿಕ್ಕಿಲ್ಲದೇ ಇರುವುದರಿಂದ ಕಳೆದ ಐವತ್ತು ವರ್ಷಗಳಲ್ಲಿ ದೇಶವು 220ಕ್ಕೂ ಹೆಚ್ಚು ಭಾಷೆಗಳನ್ನು ಕಳೆದುಕೊಂಡಿದೆ. ಒಂದು ಬುಡಕಟ್ಟಿನ ಅಥವಾ ಸಮುದಾಯದ ಹಿರಿಯರೊಬ್ಬರು ಮೃತಪಟ್ಟರೆ ಆ ಭಾಷೆಗಳೂ ಅವರೊಂದಿಗೆ ಮರೆಯಾಗುತ್ತವೆ. ಇಂಥ ಶ್ರೀಮಂತ ಭಾಷೆಗಳು/ಸಂಸ್ಕೃತಿಗಳ ಅಭಿವ್ಯಕ್ತಿಗಳನ್ನು ಸಂರಕ್ಷಿಸಲು ಅಥವಾ ದಾಖಲಿಸಲು ಯೋಜಿತ ಕ್ರಮಗಳನ್ನು ಕೈಗೊಂಡಿಲ್ಲ. ಇವೆಲ್ಲಕ್ಕಿಂತ ಮಿಗಿಲಾಗಿ, ಇಂಥ ಅಪಾಯದ ಪಟ್ಟಿಯಲ್ಲಿ ಅಧಿಕೃತವಾಗಿ ಇಲ್ಲದೇ ಇರುವ, ಉದಾಹರಣೆಗೆ ಭಾರತದ ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಇರುವ 22 ಭಾಷೆಗಳು ಕೂಡ ಅನೇಕ ಆಯಾಮಗಳಿಂದ ಗಂಭೀರ ಸಮಸ್ಯೆಗಳನ್ನೆದುರಿಸುತ್ತಿವೆ.

ಶಾಲಾ ಮತ್ತು ಉನ್ನತ ಶಿಕ್ಷಣದ ಪ್ರತಿಯೊಂದು ಹಂತದಲ್ಲಿಯೂ ಭಾರತೀಯ ಭಾಷೆಗಳ ಬೋಧನೆ ಮತ್ತು ಕಲಿಕೆಯನ್ನು ಇನ್ನಷ್ಟು ಗಟ್ಟಿಗೊಳಿಸಬೇಕಾದ ಅಗತ್ಯವಿದೆ. ಈ ಭಾಷೆಗಳು ಪ್ರಸ್ತುತ ಚಲನಶೀಲವಾಗಿ ಇರುವಂತೆ ಮಾಡಲು ಪಠ್ಯಪುಸ್ತಕಗಳು, ವೀಡಿಯೋಗಳು, ನಾಟಕಗಳು, ಕವಿತೆಗಳು, ಕಾದಂಬರಿ, ನಿಯತಕಾಲಿಕೆಗಳೂ ಸೇರಿದಂತೆ ಈ ಭಾಷೆಗಳಲ್ಲಿರುವ ಉನ್ನತ ಮಟ್ಟದ ಕಲಿಕಾ ಮತ್ತು ಮುದ್ರಣ ಸಾಮಗ್ರಿಗಳು ನಿರಂತರವಾಗಿ ಪ್ರಸಾರವಾಗುವಂತೆ ಮಾಡಬೇಕು. ಈ ಮಾತುಗಳು ಬಹಳ ಮಹತ್ವದ್ದು ಮತ್ತು ಭಾಷೆಯ ಬಗ್ಗೆ ಸರಿಯಾದ ತಿಳುವಳಿಕೆಗಳಿಂದ ಕೂಡಿದ್ದು. ಆದರೆ ನಿಜವಾಗಿ ನಮ್ಮ ದೇಶದಲ್ಲಿ ಆಗುತ್ತಿರುವುದೇನು? ಕಳೆದ ಕೆಲವು ವರ್ಷಗಳಿಂದ ಕೇಂದ್ರ ಮತ್ತು ರಾಜ್ಯ ಸರಕಾರಗಳು ಭಾಷಾ ಅಧ್ಯಯನವನ್ನು "ಅನುತ್ಪಾದಕ" ಎಂದು ಹೇಳುತ್ತಿವೆ. ಜನರೂ ಅದನ್ನು ನಂಬಿ ಭಾಷಾ ಕಲಿಕೆಯಿಂದ ದೂರ ಹೋಗುತ್ತಿದ್ದಾರೆ. ಮಕ್ಕಳಿಗೆ ಕೆಲವು ಕೌಶಲ್ಯಗಳನ್ನು ಕಲಿಸಿ, ಅವರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಡುವುದು ಇಲ್ಲವೇ ವಿದೇಶಗಳಿಗೆ ಕಳಿಸಿಕೊಡುವುದು ಮುಖ್ಯ ಎಂದು ಬಹುತೇಕ ಎಲ್ಲರೂ ನಂಬಿದ್ದಾರೆ.

ಸ್ಪರ್ಧಾತ್ಮಕ ಆರ್ಥಿಕತೆಯ ಹಿಂದೆ ಬಿದ್ದಿರುವ ಜನರಿಗೆ ಭಾಷೆ ಮತ್ತು ಸಾಹಿತ್ಯದ ಮಹತ್ವ ಕಡಿಮೆಯಾಗುತ್ತದೆ. ಈ ನಡುವೆ ಭಾಷೆಗಳ ಕುರಿತು ತಿಳುವಳಿಕೆಗಳನ್ನು ಹೆಚ್ಚಿಸಿ, ಮುಕ್ತ ಚಿಂತನೆಗೆ ಮತ್ತು ವಿಮರ್ಶೆಗೆ ಪೂರ್ಣ ಅವಕಾಶ ಮಾಡಿಕೊಡುವುದು

ಪ್ರಜಾಪ್ರಭುತ್ವವಾದಿ ಸರಕಾರಗಳ ಅತಿ ದೊಡ್ಡ ಜವಾಬ್ದಾರಿ ಎಂಬುದನ್ನು ಸರಕಾರಗಳೇ ಮರೆತಿವೆ. ಜನರ ನೈತಿಕತೆಯನ್ನು ಹೆಚ್ಚಿಸಲು, ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು, ಪ್ರಜಾಪ್ರಭುತ್ವದ ಬೇರುಗಳನ್ನು ಬಲಗೊಳಿಸಲು ಮತ್ತು ಜೊತೆಗಿರುವ ಜನರ ಯೋಚನಾ ಶಕ್ತಿಯನ್ನು ತೀಕ್ಷ್ಣಗೊಳಿಸಲು ಸರಕಾರಗಳು ಬೌದ್ಧಿಕ ಸಂವಾದಗಳನ್ನು ಪ್ರೋತ್ಸಾಹಿಸುತ್ತಿರಬೇಕು. ಇದು ರಾಷ್ಟ್ರೀಯ ಶಿಕ್ಷಣದಲ್ಲಿ ಅಳವಡಿಸುವುದನ್ನು ಕಾಣಬಹುದು. ಆದರೆ ವರ್ತಮಾನ ಕಾಲದಲ್ಲಿ ಸರಕಾರಗಳೇ ಅಂಥ ಪ್ರಕ್ರಿಯೆಗಳಿಗೆ ವಿರೋಧವಾಗಿವೆ. ಸಾಮಾಜಿಕ ಜಾಲತಾಣಗಳೂ ಸೇರಿದಂತೆ, ಮಾಧ್ಯಮಗಳು ಕೂಡಾ ಭಾಷೆಗಳ ಸಾವನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಇದೀಗ ಕೇಂದ್ರ ಸರ್ಕಾರವು ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತರುತ್ತಿದೆ. ಈ ನೀತಿಯು ಭಾರತದಲ್ಲಿ ಭಾಷೆಗಳನ್ನು ಬಲಪಡಿಸಲಿದೆ. ಕನ್ನಡವೂ ಸೇರಿದಂತೆ ಇತರ ಭಾಷೆಗಳನ್ನು ಅದು ಸದ್ಯಕ್ಕೆ ಹಿಂದಕ್ಕೆ ತಳ್ಳಿದೆ ಎಂಬ ಮಾತು ಕೇಳಿ ಬರುತ್ತಿದೆ. ದೇಸಿ ಭಾಷೆಗಳ ಅಭಿವೃದ್ಧಿ ಜವಾಬ್ದಾರಿಯು ರಾಜ್ಯ ಸರಕಾರದ್ದು ಎಂಬ ವಿಚಾರವನ್ನು ಅರಿತು ಕನ್ನಡ ಭಾಷೆಗೆ ಮಹತ್ವ ನೀಡಲು ಸಾಧ್ಯವಾಗಿದೆ. ಈಗ ಹೊಸ ಶಿಕ್ಷಣ ನೀತಿ 2020 ಇಡೀ ದೇಶದಾದ್ಯಂತ ಚರ್ಚೆಗೆ ಒಳಗಾಗುತ್ತಿದೆ. ಅನೇಕ ಬಗೆಯ ಪ್ರಗತಿಪರವಾದಂತಹ, ಅತಿ ಆಧುನಿಕವಾದಂತಹ ತಾಂತ್ರಿಕ ಶಿಕ್ಷಣ, ತಾಂತ್ರಿಕ ವಿಚಾರಗಳು, ತಂತ್ರಜ್ಞಾನದ ಮೂಲಕ ಶಿಕ್ಷಣ, ವೃತ್ತಿಪರವಾದ ಶಿಕ್ಷಣ, ವಿದ್ಯಾರ್ಥಿಗಳಲ್ಲಿ ಕೌಶಲ್ಯವನ್ನು ಅಭಿವೃದ್ಧಿಪಡಿಸುವುದು ಹೀಗೆ ಅನೇಕ ಮಹತ್ವದ ವಿಚಾರಗಳನ್ನು ಒಳಗೊಂಡಿದ್ದು ಅದರ ಅನುಷ್ಠಾನವು ಸಮರ್ಪಕವಾಗಿ ಆಗಬೇಕಾಗಿದೆ. ಶಿಕ್ಷಣದ ಮಹತ್ವವನ್ನು ಎತ್ತಿ ಹಿಡಿಯುತ್ತಲೇ ಶೈಕ್ಷಣಿಕ ಸ್ವರೂಪವನ್ನು ತಿಳಿಸಿ, ಗುರಿ, ಉದ್ದೇಶ, ಸಾಧನೆಯ ಮಾರ್ಗ, ಯೋಜನೆಯನ್ನು ಕಾರ್ಯಗೊಳಿಸುವ ಬಗೆ ಮೊದಲಾದವುಗಳನ್ನೆಲ್ಲಾ ಚರ್ಚಿಸಿ, ಕಾರ್ಯಗತಗೊಳಿಸಿ, ನಮ್ಮ ಸಮಾಜದಲ್ಲಿ ಶೈಕ್ಷಣಿಕ ವ್ಯವಸ್ಥೆಯೊಂದನ್ನು ರೂಪಿಸಬೇಕಿದೆ. “ವ್ಯಕ್ತಿ ಹುಟ್ಟಿನಿಂದ ಅಪರಾಧಿಯಲ್ಲ, ಬೆಳೆದಂತೆ ಅಪರಾಧಿಯಾಗುತ್ತಾನೆ” ಎಂದು ಸಮಾಜಶಾಸ್ತ್ರಜ್ಞರು ಹೇಳುತ್ತಾರೆ. ಮಗುವಿನ ಮನಸ್ಸು ಸ್ವಚ್ಛವಾದ ಕಪ್ಪುಹಲಗೆ, ಅದರ ಮೇಲೆ ಏನನ್ನು ಬೇಕಾದರೂ ಬರೆಯಬಹುದು. ವಿದ್ಯಾರ್ಥಿಯಲ್ಲಿ ಜ್ಞಾನ, ವರ್ತನೆ, ನಡತೆಯನ್ನು ರೂಪಿಸುವುದೇ ಶಿಕ್ಷಣ. ಶಿಕ್ಷಣವೆಂದರೆ ಬೆಳವಣಿಗೆ. ಹೀಗೆ ಮಗು ಮನುಷ್ಯನಾಗಿ ರೂಪುಗೊಳ್ಳಲು ನೆರವಾಗುವ ಶಿಕ್ಷಣವನ್ನು ನೀಡುವಂತಹ ಪ್ರಮುಖ ಮಾಧ್ಯಮವೇ ಭಾಷೆ. ಶಿಕ್ಷಣವನ್ನು ನೀಡುವಲ್ಲಿ ಭಾಷೆಯ ಪಾತ್ರ ಮಹತ್ವದ್ದು. ಶಿಕ್ಷಣದ ಮಾಧ್ಯಮ ಕುರಿತು ಈ ರಾಷ್ಟ್ರೀಯ ಶಿಕ್ಷಣದಲ್ಲಿ ಗಂಭೀರವಾದ ಚರ್ಚೆಗಳು ನಡೆಯುತ್ತಿವೆ.

ಸಣ್ಣ ಭಾಷೆಗಳ ಸಾವು:

ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಆಳುವ ಶಕ್ತಿಶಾಲಿ ಭಾಷೆಯಾಗಿ ಇಂಗ್ಲಿಷ್ ಹೊರಹೊಮ್ಮಿದೆ. “ಇಂಗ್ಲಿಷ್ ಭಾಷೆ ಕಲಿತರೆ ಆರ್ಥಿಕವಾಗಿ ಅಭಿವೃದ್ಧಿ ಹೊಂದಬಹುದು” ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಜಗತ್ತಿನ ಅನೇಕ ದೇಶಗಳು ಈ ಬೆಳವಣಿಗೆಯನ್ನು ಒಪ್ಪಿಕೊಂಡಿವೆ. ಸರಿಯೋ ತಪ್ಪೋ ಹೊಸ ತಲೆಮಾರಿನ

ಜನರು ಇಂಗ್ಲಿಷನ್ನು ಅನ್ನದ ಭಾಷೆಯಾಗಿ ಗ್ರಹಿಸಿದ್ದಾರೆ. ಇದರಿಂದಾಗುತ್ತಿರುವ ಬಹಳ ದೊಡ್ಡ ಅಪಾಯವೆಂದರೆ, ಜಗತ್ತಿನಾದ್ಯಂತ ಸಜೀವವಾಗಿರುವ ಸಾವಿರಾರು ಸಣ್ಣ ಭಾಷೆಗಳು ಸಾಯುತ್ತಿರುವುದು. ಈ ಬಗ್ಗೆ ಆಯಾ ದೇಶಗಳ ಸರಕಾರಗಳು ಏನೂ ಕ್ರಮ ಕೈಗೊಳ್ಳುತ್ತಿಲ್ಲ. ಅಧಿಕಾರಿಗಳು ಮತ್ತು ಸರಕಾರಗಳು ಸಣ್ಣ ಭಾಷೆಗಳ ಕುರಿತು ತೋರುತ್ತಿರುವ ನಿರ್ಲಕ್ಷ್ಯವು ಅವುಗಳನ್ನು ಜಗತ್ತಿನಾದ್ಯಂತ ಅವಸಾನದ ಅಂಚಿಗೆ ತಂದು ನಿಲ್ಲಿಸಿವೆ. ಭಾರತದಲ್ಲಿ ಈ ಸಮಸ್ಯೆ ಇನ್ನೂ ತೀವ್ರವಾಗಿದ್ದರೂ, ಧರ್ಮ, ಭ್ರಷ್ಟಾಚಾರ, ಜಾತಿ, ಮತ್ತಿತರ ವಿಷಯಗಳ ಕುರಿತು ಚರ್ಚೆ ನಡೆದ ಹಾಗೆ, ಹಿನ್ನಡೆ ಅನುಭವಿಸುತ್ತಿರುವ ಕನ್ನಡದಂಥ ಭಾಷೆಯ ಉಳಿಯುವಿಕೆಯ ಕುರಿತು ಗಂಭೀರ ಸಂವಾದ ನಡೆಯುವ ಆಶಾದಾಯಕ ವಿಚಾರ ಇಲ್ಲಿ ಗಮನಿಸಬಹುದು.

ಭಾಷೆಗೆ ಸಂಬಂಧಿಸಿದಂತೆ 1971 ರಿಂದಲೂ ಕೇಂದ್ರ ಸರಕಾರ ಒಂದು ಧೋರಣೆಯನ್ನು ಸ್ಪಷ್ಟವಾಗಿ ಅನುಸರಿಸುತ್ತಲೇ ಬಂದಿದೆ. ಅದೆಂದರೆ 10 ಸಾವಿರ ಮತ್ತು ಅದಕ್ಕಿಂತ ಹೆಚ್ಚು ಜನರು ಮಾತಾಡುವ ಭಾಷೆಗಳನ್ನು ಮಾತ್ರ ಅದು ಜನಗಣತಿಯಲ್ಲಿ ವಿಶ್ಲೇಷಣೆಗೆ ಬಳಸಿಕೊಳ್ಳುತ್ತದೆ. ಈ ನಿಲುವಿನಿಂದಾಗಿ ನಮ್ಮ ದೇಶದ ಅನೇಕ ಸ್ವತಂತ್ರ ಭಾಷೆಗಳ ಹೆಸರುಗಳು (ಉದಾಹರಣೆಗೆ: ಕೊರಗ ಭಾಷೆ) ಇಲ್ಲಿ ಲಭ್ಯವಾಗುವುದೇ ಮಿತಿಯೊಳಗೆ. 2001ರ ಜನಗಣತಿಯು ಒಟ್ಟು 19569 ಭಾಷೆಗಳನ್ನು ಮಾತೃಭಾಷೆಗಳೆಂದು ಮನ್ನಿಸುತ್ತದೆ, ಇದರಲ್ಲಿ ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರಿದ ಭಾಷೆಗಳ ಸಂಖ್ಯೆ ಕೇವಲ 22. ಈಗ ಸಂವಿಧಾನದ ಮನ್ನಣೆ ಪಡೆಯಲು ಕಾದು ಕುಳಿತಿರುವ ಸ್ವತಂತ್ರ ಭಾಷೆಗಳ ಸಂಖ್ಯೆ 99. 8ನೇ ಪರಿಚ್ಛೇದಕ್ಕೆ ಸೇರಿರುವ ಭಾಷೆಗಳಲ್ಲಿ ಹಿಂದಿಯು 52,83,47,193 ಜನರನ್ನು ಹೊಂದಿದ್ದು (ಶೇಕಡಾ 43.63) ಪ್ರಥಮ ಸ್ಥಾನದಲ್ಲಿದೆ, 4,37,06,512 ಜನರನ್ನು ಹೊಂದಿರುವ (ಶೇಕಡಾ 3.61) ಕನ್ನಡವು ಈ ಪಟ್ಟಿಯಲ್ಲಿ ಅತ್ಯಂತ ಕೆಳಗಿದೆ. ಈ ನಡುವೆ ಯೂನೆಸ್ಕೋವು ಸಿದ್ಧಪಡಿಸಿದ "ಭಾಷೆಗಳ ಜಾಗತಿಕ ಭೂಪಟ"ವು ಭಾರತದಲ್ಲಿನ 172 ಭಾಷೆಗಳನ್ನು ಅಪಾಯದಲ್ಲಿರುವ ಭಾಷೆಗಳೆಂದೂ 71 ಭಾಷೆಗಳನ್ನು ಎಲ್ಲ ಬಗೆಯ ಅಪಾಯಗಳಿಗೆ ಬಲಿಯಾಗುತ್ತಿರುವ ಭಾಷೆಗಳೆಂದೂ ಗುರುತಿಸಿದೆ. ಆದರೆ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಮಾತೃಭಾಷೆಗೆ ಮಹತ್ವ ನೀಡಿದೆಯನ್ನಬಹುದು.

ಸಮಾರೋಪ:

ಇಂಥ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ, ಅದರಲ್ಲೂ ಮುಖ್ಯವಾಗಿ ಭಾಷೆ ಮತ್ತು ಸಾಹಿತ್ಯಗಳ ಕ್ಷೇತ್ರದಲ್ಲಿ ಕೆಲಸ ಮಾಡುವ ಎಲ್ಲರೂ ತಮ್ಮ ತಮ್ಮ ಜವಾಬ್ದಾರಿಗಳ ಬಗ್ಗೆ ಹೊಸದಾಗಿ ಯೋಚಿಸಬೇಕಾಗಿದೆ. ಬದಲಾಗುತ್ತಿರುವ ಜಗತ್ತಿನ ಪರಿಕಲ್ಪನೆಗೆ ಸರಿಯಾಗಿ ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಆಲೋಚನೆ ಬರುವಂತೆ ಮಾಡಬೇಕಾದ್ದು ಬಹಳ ಅಗತ್ಯ. ಭಾಷೆಯ ಮೇಲೆ ಹಿಡಿತ ಬರುವಂತೆ ವಿದ್ಯಾರ್ಥಿಗಳನ್ನು ರೂಪಿಸಬೇಕು. ಸಾಹಿತ್ಯದ ಪಠ್ಯಗಳನ್ನು, ವಿಮರ್ಶಾತ್ಮಕ ಮತ್ತು ಕ್ರಿಯಾತ್ಮಕ ರೀತಿಯಲ್ಲಿ ಹೇಳಿಕೊಡುವ ಜವಾಬ್ದಾರಿ ಅಧ್ಯಾಪಕರದು. ಒಬ್ಬ ವಿದ್ಯಾರ್ಥಿ ಕುವೆಂಪುವನ್ನು ಓದುವುದೆಂದರೆ,

ಅದಕ್ಕೆ ಪೂರ್ವಭಾವಿಯಾಗಿ ಕುವೆಂಪು ಅವರ ಮೂಲ ಪಠ್ಯಗಳನ್ನು ಓದುವುದು, ಅವುಗಳ ಬಗ್ಗೆ ಚರ್ಚಿಸುವುದು, ವಿಚಾರ ವಿಮರ್ಶೆ ಮಾಡುವುದು, ಮತ್ತು ಕೊನೆಯಲ್ಲಿ ಅವರ ಬಗ್ಗೆ ವಿಸ್ತಾರವಾಗಿ ಒಂದು ಪ್ರಬಂಧವನ್ನು ಬರೆಯುವುದು. ಈ ಕ್ರಿಯೆಗಳು ವಿದ್ಯಾರ್ಥಿಯ ಪ್ರಶ್ನಿಸುವ ಸಾಮರ್ಥ್ಯವನ್ನು ಹೆಚ್ಚಿಸಿ, ಆಲೋಚನೆಗೆ ಅವಕಾಶ ಮಾಡಿಕೊಡುತ್ತದೆ. ಪ್ರತಿಕ್ರಿಯೆ ಮತ್ತು ಸಮರ್ಥನೆಯ ಅನಂತರ ತರ್ಕಬದ್ಧವಾದ ಪ್ರಬಂಧವೊಂದನ್ನು ರಚಿಸಲು ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತದೆ. ಸಂಶೋಧನೆಯು ಈ ಹಿನ್ನೆಲೆಯಲ್ಲಿ ಬೆಳೆಯಬೇಕಾಗಿದೆ. ಒಟ್ಟಿನಲ್ಲಿ ಈ ಒಂದು ಶಿಕ್ಷಣದಿಂದ ವಿದ್ಯಾರ್ಥಿಯನ್ನು ಸರಿ ತಪ್ಪುಗಳ ಹಂಗಿಲ್ಲದ ತತ್ವಶಾಸ್ತ್ರದ ಆಶ್ಚರ್ಯಕರ ಜಗತ್ತಿಗೆ ಕರೆದೊಯ್ಯಬೇಕು ಎಂಬುವುದು ನಮ್ಮ ಆಶಯವಾಗಿದೆ.

ಪರಾಮರ್ಶನ ಗ್ರಂಥಗಳು:

1. ರಾಷ್ಟ್ರೀಯ ಶಿಕ್ಷಣ ನೀತಿ–2020, ಶಿಕ್ಷಣ ಸಚಿವಾಲಯ, ಭಾರತ ಸರ್ಕಾರ
2. ಎಸ್. ಕೇಶವ ಮೂರ್ತಿ, ಶಿಕ್ಷಣ ಸಿದ್ಧಾಂತ, ವಿದ್ಯಾನಿಧಿ ಪ್ರಕಾಶನ, ಗದಗ– 1999
3. ರಾಷ್ಟ್ರೀಯ ಶಿಕ್ಷಣ ನೀತಿ–2020, ಡಾ. ನಾಗರಾಜ ಆರ್. ಮತ್ತು ಡಾ. ಪ್ರವೀಣ್ ಚಂದ್ರ ಎನ್, ಸಂಪದಾ ಪ್ರಕಾಶನ, ಬೆಂಗಳೂರು–2021

Funding:

This study was not funded by any grant.

Conflict of interest:

The Authors have no conflict of interest to declare that they are relevant to the content of this article.

About the License:

© The Authors 2024. The text of this article is open access and licensed under a Creative Commons Attribution 4.0 International License.